ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕು ಬೈಲವಾಡಿಯಲ್ಲಿರುವ ನೀರಾವರಿ ಕೆರೆಗೆ ಪಕ್ಕದಲ್ಲಿರುವ ಇಂಚಲ ಮತ್ತು ಮುತ್ತವಾಡ ಹಳ್ಳದ ಕಾಲುವೆಯ ನೀರನ್ನು ಬಿಡುವುದರಿಂದ ಆ ಕೆರೆಯ ನೀರಾವರಿ ಸಾಮರ್ಥ್ಯ ಹೆಚ್ಚಿಗೆ ಆಗುವುದಿಲ್ಲವೇ.

ಆ ಹಾಗಿದ್ದಲ್ಲಿ ಆ ನೀರಾವರಿ ಕೆರೆ ನೀರಿನ ಸಾಮರ್ಥ್ಯವನ್ನು ಹೆಚ್ಚಿಸಲು ಸರ್ಕಾರದವರು ಯಾವಕ್ರಮ ಕೈಗೊಂಡಿರುವರು.

ಇ ಅದರ ಅಂದಾಜು ವೆಚ್ಚ ಪತ್ರಿಕೆಯನ್ನು ತಯಾರಿಸಲಾಗಿದೆಯೇ.

ಈ ಈ ಹೊಸ ಸಾಮರ್ಥ್ಯ ಮಾಡುವುದರಿಂದ ಎಷ್ಟು ಎಕರೆಗೆ ನೀರಾವರಿ ಆಗುವುದು ಹಾಗೂ ಎಷ್ಟು ಖರ್ಚು ಬರುವುದು ?

ಶ್ರೀ ಕೆ.ಎಸ್.ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):-

ಅ ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ಬೈಲವಾಡಿಯಲ್ಲಿ ನೀರಾವರಿ ಕೆರೆ ಇರುವುದಿಲ್ಲ ಆದುದರಿಂದ ಸಾಮರ್ಥ್ಯ ಹೆಚ್ಚಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ ಪ್ರಶ್ನೆ ಉದ್ಭವಿಸುವುದಿಲ್ಲ.

ಲೋಕೋಪಯೋಗಿ ಇಲಾಖೆಯಿಂದ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ರಸ್ತೆಗಳ ಅಭಿವೃದ್ಧಿಗೆ 12 ಲಕ್ಷ ರೂ ಬಿಡುಗಡೆ ಮಾಡಿರುವ ಬಗ್ಗೆ.

(1954)ಶ್ರೀ ಎಂ.ನಾರಾಯಣಸ್ವಾಮಿ (ಬೇತಮಂಗಲ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ ಲೋಕೋಪಯೋಗಿ ಇಲಾಖೆಯಿಂದ ಸರ್ಕಾರ ಪ್ರತಿ ವಿಧಾನಸಭೆ ಕ್ಷೇತ್ರಗಳಿಗೆ ರಸ್ತೆಗಳ ಅಭಿವೃದ್ಧಿಗೆ 12 ಲಕ್ಷ ರೂಪಾಯಿ ಬಿಡುಗಡೆ ಮಾಡುವ ವಿಚಾರವು ಸರ್ಕಾರದ ಮುಂದೆ ಇದೆಯೇ.

ಆ ಇದ್ದರೆ ಯಾವಾಗ ಜಾರಿಗೆ ತರಲಾಗುವುದು.

ಇ ಇಲ್ಲದಿದ್ದರೆ ಕಾರಣವೇನು ?

ಶ್ರೀ ಜಿ. ಹೆಚ್.ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು):-

ಅ ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆ ರಸ್ತೆ ಮತ್ತು ಸೇತುವೆಗಳ ಅಭಿವೃದ್ಧಿಯನ್ನು 12.00 ಲಕ್ಷ ರೂ.ಗಳ ಅಂದಾಜಿನಲ್ಲಿ ತೆಗೆದುಕೊಳ್ಳಲು 1990-91ನೇ ಸಾಲಿನಲ್ಲಿ ಮಂಜೂರಾತಿ ನೀಡಿದ್ದು ಉಳಿಕೆ ಕಾಮಗಾರಿಗಳನ್ನು 1991-92ನೇ ಸಾಲಿನಲ್ಲಿಯೂ ಮುಂದುವರಿಸಲಾಗಿದೆ.

ಆ ಕಾಮಗಾರಿಗಳನ್ನು 1990-91ನೇ ಸಾಲಿನಿಂದಲೇ ಮಾಡಲಾಗುತ್ತಿದೆ.

ಇ ಪ್ರಶ್ನೆ ಉದ್ಭವಿಸುವುದಿಲ್ಲ.

ಚಿಕ್ಕಮಗಳೂರು ತಾಲ್ಲೂಕು ಅಭಿವೃದ್ಧಿ ಕಾರ್ಯ

(2364)ಶ್ರೀ ಸಿ.ಆರ್ ಷಾಗೀರ್ ಅಹಮದ್ (ಚಿಕ್ಕಮಗಳೂರು):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದಂತೆ ಸರ್ಕಾರವು ಚಿಕ್ಕಮಗಳೂರು ಜಿಲ್ಲೆಯಲ್ಲಿನ ಚಿಕ್ಕಮಗಳೂರು ತಾಲ್ಲೂಕಿನ ಹರಿಜೆಹಳ್ಳಿ ಮತ್ತು ಬನ್ನೂರುಗಳ ಮಧ್ಯೆ ಸೇತುವೆ ನಿರ್ಮಾಣ ಕಾರ್ಯವನ್ನು ತೆಗೆದುಕೊಂಡಿದೆಯೇ? ಹಾಗಿದ್ದಲ್ಲಿ 1991-92ನೇ ಸಾಲಿನ